# ಶ್ರೀಶಾರದಾದೇವಿ ಮತ್ತು ಆಧುನಿಕ ಮಹಿಳೆ

ಶಶಿಕಲಾ ಶ್ರೀಧರ್

*ಶ್ರೀಶಾರದಾದೇವಿಯವರ ಮತ್ತು ಆಧುನಿಕ ಮಹಿಳೆಯ ಜೀವನ ವಿಧಾನಗಳ ನಡುವೆ ಬಹಳ ಅಂತರವನ್ನು ಕಾಣುತ್ತೇವೆಯಾದರೂ ದಿನನಿತ್ಯ ಬದುಕಿನ ವ್ಯವಹಾರಗಳಲ್ಲಿ ಶ್ರೀಶಾರದಾದೇವಿಯವರು ನಡೆದುಕೊಂಡ ರೀತಿ ಆಧುನಿಕ ಮಹಿಳೆಗೆ ಆದರ್ಶವಾಗಬಲ್ಲದು ಮತ್ತು ಆದರ್ಶವಾಗಬೇಕು ಎಂಬುದನ್ನು ಒತ್ತಿ ಹೇಳುವ ಶ್ರೀಮತಿ ಶಶಿಕಲಾ ಅವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರಾಗಿರುವರು.*



**ಸೋ**ದರಿ ನಿವೇದಿತಾ 'ನಾ ಕಂಡಂತೆ ನನ್ನ ಗುರುದೇವ' ಎಂಬ ತನ್ನ ಕೃತಿಯಲ್ಲಿ, 'ಶ್ರೀರಾಮಕೃಷ್ಣರು ಭಾರತದ ನಾರಿಯರ ವಿಚಾರವಾಗಿ ಹೇಳಿದ ಕೊನೆಯ ಮಾತು ಶ್ರೀಮಾತೆಯ ಜೀವನ ಎಂದು ನನಗೆ ತೋರುವುದು. ಆದರೆ ಅವರು ಹಿಂದಿನ ಆದರ್ಶದ ಕೊನೆಯೋ ಅಥವಾ ಬರುವ ಆದರ್ಶದ ನಾಂದಿಯೋ?' ಎಂದು ತನ್ನನ್ನು ತಾನು ಪ್ರಶ್ನಿಸಿಕೊಳ್ಳುತ್ತಾಳೆ.

ಇಂದು ಈ ಪ್ರಶ್ನೆಗೆ ಉತ್ತರವಾಗಿ ಶ್ರೀಮಾತೆ ಹಳ್ಳಿಯ ಸಂಪ್ರದಾಯಗಳಿಗೂ ಆಧುನಿಕ ಜೀವನಕ್ಕೂ ಒಂದು ಮಹಾ ಸೇತುವೆಯಾಗಿ ನಿಂತು ಇಂದಿನ ಆಧುನಿಕ ಮಹಿಳೆಗೆ ಒಂದು ಆದರ್ಶವಾಗಿ, ಪ್ರೇರಕಶಕ್ತಿಯಾಗಿ ನಿಂತಿದ್ದಾರೆ. ಜೀವನದ ಸಾರ್ಥಕತೆಯನ್ನು ಮರೆತು, ಶ್ರದ್ಧೆಯ ಬುನಾದಿಯನ್ನೇ ಕಳೆದುಕೊಂಡಿರುವ ಇಂದಿನ ಮಹಿಳೆಗೆ, ಆಕೆ ಅತ್ಯಂತ ವಿದ್ಯಾವಂತೆಯಾದರೂ ಬುದ್ಧಿವಂತೆಯಾದರೂ ಸರಿಯಾದ ಮಾರ್ಗದರ್ಶನಕ್ಕಾಗಿ ತೊಳಲಾಡುವ ಸಂದರ್ಭಗಳು ಅನೇಕ ವೇಳೆ ಉಂಟಾಗುವುವು. ಇಂತಹ ಸನ್ನಿವೇಶಗಳಲ್ಲಿ ಅವಳು ಮಾಡಬೇಕಾದುದೇನು? ಆಧುನಿಕ ಮಹಿಳೆಯ ಆಗುಹೋಗುಗಳೇನು? ಅವಳ ಆಶೋತ್ತರಗಳೇನು? ಸಂಪ್ರದಾಯವನ್ನು ಸಂಪೂರ್ಣ ತೊರೆದು ಬಹಳ ದೂರ ಸಾಗಿಬಿಟ್ಟಿರುವ ಅವಳಿಗೆ ಹಾದಿಯಲ್ಲಿ ಆಗುವ ಅನಾಹುತಗಳೇನು? ಈ ಎಲ್ಲ ಆತಂಕಗಳನ್ನು ಎದುರಿಸಿ ನಿಲ್ಲಲು ಆಕೆಯು ಯಾವ ಶಕ್ತಿಯ ಮೊರೆ ಹೋಗಬೇಕು? ಅಂತ್ಯದಲ್ಲಿ ಜಯಗಳಿಸುವಳೇ? ಈ ಎಲ್ಲ ಪ್ರಶ್ನೆಗಳೂ ಇಂದಿನ ಪ್ರತಿಯೊಬ್ಬ ಮಹಿಳೆಯ ಮುಂದೆ ಬೃಹದಾಕಾರವಾಗಿ ನಿಂತು ಅವಳನ್ನು ಕಾಡುತ್ತಿವೆ, ಭೀತಿ ಹುಟ್ಟಿಸಿ ನಡುಗಿಸುತ್ತಿವೆ. ದೊಡ್ಡ ದೊಡ್ಡ ಆದರ್ಶಗಳನ್ನು ಎದುರಿಗಿಟ್ಟುಕೊಂಡು ಅದನ್ನು ಅನುಸರಿಸುವುದು ಅವಳಿಗೆ ಅಸಾಧ್ಯವಾಗುತ್ತಿದೆ.

ಇಂತಹ ಸನ್ನಿವೇಶದಲ್ಲಿ ಎಲ್ಲ ಸಾಮಾನ್ಯ ಸ್ತ್ರೀಯರಂತೆಯೇ ಮನೆಗೆಲಸಗಳೆಲ್ಲವನ್ನೂ ಮಾಡುತ್ತಲೇ, ಅವುಗಳನ್ನು ಸಾಧನೆಯಾಗಿ ಪರಿವರ್ತಿಸಿ ಭಗವಂತನನ್ನು ಪಡೆಯಲು ಸಾಧ್ಯ ಎಂಬುದನ್ನು ತೋರಿಸುವ ಮಹಾಮಹಿಮಳ ಆಗಮನ ಅಗತ್ಯವಾಗಿ ಪರಿಣಮಿಸಿತು. ಸಾಧಾರಣ ಸ್ತ್ರೀಯೊಬ್ಬಳು ಆದರ್ಶ ಮಗಳಾಗಿ, ಮಡದಿಯಾಗಿ, ಮಾತೆಯಾಗಿ ನಿಲ್ಲುವುದು ಅಸಾಧ್ಯವೇನಲ್ಲ ಎಂಬುದನ್ನು ಬಾಳಿತೋರಿಸುವ ಜ್ವಲಂತ ಜೀವಂತ ಉದಾಹರಣೆಯ ಪ್ರತೀಕ್ಷೆ ಎದುರು ನಿಂತಿರುವಂತಹ ಸನ್ನಿವೇಶದಲ್ಲಿ ಶ್ರೀಮಾತೆ ಶಾರದಾದೇವಿಯ ಪವಿತ್ರ ಅವತರಣವಾಗಿದೆ. ಇಂತಹ ಶ್ರೀಮಾತೆಯ ಹಾಗೂ ಆಧುನಿಕ ಮಹಿಳೆಯರ ನಡುವೆ ಇರುವ ಸಾಮ್ಯವೆಷ್ಟು? ಅಂತರವೆಷ್ಟು? ಅರಿತು ಅನುಸರಿಸಿದರೆ ಪ್ರಯೋಜನವೆಷ್ಟು ಎಂಬುದೇ ಈ ಅಧ್ಯಯನದ ಉದ್ದೇಶ.

ಸಾಧಾರಣ ಬಡ ಕುಟುಂಬದಲ್ಲಿ ಗುಡಿಸಲಲ್ಲಿ ಜನಿಸಿ, ಹೆತ್ತವರ ಪ್ರೇಮದ ಪುತ್ಥಳಿಯಾಗಿ, ಕೈಹಿಡಿದ ಪತಿಯ ಧರ್ಮಪತ್ನಿಯಾಗಿ, ಆ ಧರ್ಮದೇವತೆಯ ಎಲ್ಲ ಮಕ್ಕಳ ಅಕ್ಕರೆಯ ಮಾತೆಯಾಗಿ, ಪತಿಯ ನಿಷ್ಕ್ರಮಣದ ನಂತರ ಅವನ ಸ್ಥಾನದಲ್ಲಿ ಗುರುವಾಗಿ ನಿಂತು ಬಳಿಗೆ ಬಂದ ಎಲ್ಲ ಹಣತೆಗಳಿಗೆ ಬೆಳಕಿನ ಕಿರಣವನ್ನಿತ್ತು, ಹಿಂದೆಯೂ ಇಂದೂ ಮತ್ತು ಮುಂದೆ ಎಂದೆಂದೂ ಬೆಳಗುವ, ಬೆಳಗಿಸುವ ದಿವ್ಯ ಪ್ರಭಾವಲಯ ಶ್ರೀಮಾತೆ ಶಾರದಾದೇವಿ.

## ಬಾಲ್ಯ: ಮನೆಯ ಹಿರಿಯ ಮಗಳು

ಶ್ರೀಮಾತೆಯ ಮಾತಾಪಿತೃಗಳು ಅತ್ಯಂತ ಧಾರ್ಮಿಕ ಪ್ರವೃತ್ತಿಯವರಾಗಿದ್ದುದರಿಂದ ಶಾರದೆಗೆ ಬಾಲ್ಯದಿಂದಲೇ ಭಗವಂತನ ಸಾನ್ನಿಧ್ಯದ ಅನುಭವವಾಗಲು ಅತ್ಯಂತ ಅನುಕೂಲಕರವಾಗಿತ್ತು. ಮನೆಯ ಪರಿಶುದ್ಧ ವಾತಾವರಣ, ತಂದೆತಾಯಿಯರ ವಾತ್ಸಲ್ಯ, ಧಾರ್ಮಿಕ ನಿಷ್ಠೆಯಿಂದಾಗಿ ಸಿಗುವ ಸುರಕ್ಷತೆ ಆಧುನಿಕ ಪೌರಸ್ತ್ಯ ಅಥವಾ ಪಾಶ್ಚಾತ್ಯ ಮಕ್ಕಳಿಗಾಗಲೀ ಮಹಿಳೆಯರಿಗಾಗಲೀ ಸಿಗುವುದು ಅಪರೂಪ. ಮಕ್ಕಳಿಗೆ ಎಳೆಯ ವಯಸ್ಸಿನಲ್ಲಿ ಉತ್ತಮ ಸಂಸ್ಕಾರಗಳು ಮೂಡಲು ಪ್ರಪ್ರಥಮ ಕಾರಣಕರ್ತರು ಮಾತಾಪಿತೃಗಳು. ಈಗಿನ ಆಧುನಿಕ ಕುಟುಂಬಗಳಲ್ಲಿ ಮಕ್ಕಳ ಬೆಳ

ವಣಿಗೆಯ ಕಡೆಗೆ ಗಮನ ಕೊಡಲು ತಂದೆತಾಯಿಯರಿಗೆ ಸಮಯವೆಲ್ಲಿದೆ? ವಿಭಕ್ತ ಕುಟುಂಬಗಳಲ್ಲಿ ತಾತಅಜ್ಜಿಯರ ಸಂಗವೂ ಮಕ್ಕಳಿಗೆ ಸಿಗುತ್ತಿಲ್ಲ. ಅವರ ವಾಸ ವೃದ್ಧಾಶ್ರಮಗಳಲ್ಲಿ. ಹೀಗೆ ಮಾತಾಪಿತೃಗಳ ಪೂರ್ಣ ಸಂಪರ್ಕ, ತಾತಅಜ್ಜಿಯರ ಪ್ರೀತಿಯ ಮಾರ್ಗದರ್ಶನ ಸಿಗದ ಇಂದಿನ ಮಕ್ಕಳು ತಮ್ಮದೇ ಆದ ರೀತಿಯಲ್ಲಿ ಸ್ವೇಚ್ಛೆಯಿಂದ ಬೆಳೆಯುತ್ತಿದ್ದಾರೆ. ಇಂತಹ ಮಕ್ಕಳು ಮುಂದಿನ ಉತ್ತಮ ಪ್ರಜೆಗಳಾಗಲು ಸಾಧ್ಯವೇ?

ಆದರೆ ಶಾರದೆಯ ಕುಟುಂಬ ಉತ್ತಮ ಸಂಸ್ಕಾರವಂತ ತಂದೆ ತಾಯಿಯರ ಪ್ರೀತಿಯ ನೆರಳಿನಲ್ಲಿ ಸುಗಮವಾಗಿ ಸಾಗುತ್ತಿತ್ತು. ಮನೆಯ ಹಿರಿಯ ಮಗಳಾಗಿ ಶಾರದೆ ತಾನು ಮಾಡಬೇಕಾದ ಯಾವ ಕರ್ತವ್ಯವನ್ನೂ ಮರೆಯಲಿಲ್ಲ. ಒಬ್ಬ ಹಿರಿಯ ಸೋದರಿಯಾಗಿ ಐದು ಮಂದಿ ತಮ್ಮಂದಿರನ್ನು ಶ್ರದ್ಧೆಯಿಂದಲೂ ದಕ್ಷತೆಯಿಂದಲೂ ಸಾಕಿ ಸಲಹಿದರು. ಆಗ ಅವರು ಪಟ್ಟ ಕಷ್ಟಗಳ ಬಗ್ಗೆ ಅವರ ತಮ್ಮ ಕಾಳೀಕುಮಾರನೇ ಹೇಳುತ್ತಾನೆ: "ನಮ್ಮ ಸೋದರಿ ಲಕ್ಷ್ಮಿಯ ಅವತಾರವೇ. ನಮ್ಮನ್ನು ಜೀವದಿಂದಿರಿಸಲು ಏನೆಲ್ಲ ಮಾಡಿದಳು. ಭತ್ತ ಕುಟ್ಟುವುದು, ಜನಿವಾರ ನೇಯುವುದು, ಹಸುಗಳನ್ನು ನೋಡಿಕೊಳ್ಳುವುದು ಹೀಗೆ ಎಲ್ಲ ಮನೆ ಕೆಲಸಗಳನ್ನು ಅವಳೊಬ್ಬಳೇ ನಿಭಾಯಿಸುತ್ತಿದ್ದಳು."

## ಯೌವನ : ವಿವಾಹ

ಮುಂದೆ ಹದಿನಾಲ್ಕು ವರ್ಷದ ಬಾಲೆ ತನ್ನ ಪತಿ ಶ್ರೀರಾಮಕೃಷ್ಣರೊಡನೆ ಕಾಮಾರಪುಕುರದಲ್ಲಿ ಮೂರು ತಿಂಗಳುಗಳ ಕಾಲ ಕಳೆದಾಗ, ರಾಮಕೃಷ್ಣರು ಪತ್ನಿ ಶಾರದೆಗೆ ಇಹಲೋಕದ ವ್ಯವಹಾರಚತುರತೆಯನ್ನೂ ಪಾರಮಾರ್ಥಿಕ ಜೀವನದ ಸಾಫಲ್ಯವನ್ನೂ ವಿವರಿಸಿದಾಗ ಪವಿತ್ರ ಹೃದಯದ ಶಾರದೆಯ ಬುದ್ಧಿ ಮನಸ್ಸುಗಳು ಪ್ರತಿಧ್ವನಿಸಿದವು. ಯಾವ ವಯಸ್ಸಿನಲ್ಲಿ ಆಧುನಿಕ ಮಹಿಳೆ ಮನಸ್ಸಿನ ಚಾಂಚಲ್ಯ, ಅತೃಪ್ತಿ, ಅಶಾಂತಿ, ಅಸ್ಥಿರತೆಯಿಂದ ತೊಳಲಾಡುವಳೋ ಅಂತಹ ವಯಸ್ಸಿನಲ್ಲಿ ಶಾರದೆಗಾದರೋ ಒಂದು ಅಮೃತಾನಂದದ ಪೂರ್ಣಕುಂಭವನ್ನೇ ಹೃದಯದಲ್ಲಿ ಇಟ್ಟಂತಹ ದಿವ್ಯ ಅನುಭವ!

ಆಧುನಿಕ ಯುಗಕ್ಕೆ ಮುಖ್ಯವಾಗಿ ಆಧುನಿಕ ಸ್ತ್ರೀಯರಿಗೆ ಶ್ರೀಮಾತೆ ತಾನು ಪತ್ನಿಯಾಗಿ ಪತಿಗೆ ಮಾಡಬೇಕಾದ ಸೇವೆಯ ಬಗ್ಗೆ ತೋರಿದ ಆದರ್ಶ ಅತ್ಯಂತ ಅನುಕರಣೀಯ ಹಾಗೂ ಆದರಣೀಯ. ನಹಬತ್‌ಖಾನೆಯ ಅತ್ಯಂತ ಕಿರಿದಾದ ಕೋಣೆಯಲ್ಲಿ ವಾಸಿಸುತ್ತಾ ತನಗೆ ಎಷ್ಟೇ ಅನಾನುಕೂಲವಾದರೂ ಪತಿಯ ಸೇವೆ, ಭಕ್ತರ ಸೇವೆಯಲ್ಲಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ವಿಶ್ರಾಂತಿಯನ್ನೇ ಬಯಸದ ಅನವರತ ದುಡಿತ ಆಕೆಯದು. ಕೆಲವು ಬಾರಿ ಹಗಲೂ ಇರುಳೂ ಆಹಾರದ ತಯಾರಿ ಸಾಗುತ್ತಿತ್ತು. ರಾಮಕೃಷ್ಣರನ್ನು ಕಾಣಲು ಬರುವ ಎಲ್ಲ ಭಕ್ತರಿಗೆ ಎಲ್ಲ ಸಮಯದಲ್ಲೂ ಈ ಅನ್ನಪೂರ್ಣೆಯ ಶುಭ ಹಸ್ತದಿಂದ ತಯಾರಾದ ಭಗವತ್ಪ್ರಸಾದ ಸದಾ ಸಿದ್ಧವಾಗಿರುತ್ತಿತ್ತು. ಸೇವಿಸಿದವರೆಲ್ಲರಿಗೂ ಪ್ರಸನ್ನತೆಯನ್ನುಂಟುಮಾಡುತ್ತಿತ್ತು.

> ಅವರ ಸೇವೆಗಾಗಿ ಪಟ್ಟ ಯಾವ ಕಷ್ಟವೂ ನನಗೆ ಕಷ್ಟವೆನಿಸಲಿಲ್ಲ. ಆ ಆನಂದದಲ್ಲಿ ದಿನ ಕಳೆದದ್ದೇ ಗೊತ್ತಾಗಲಿಲ್ಲ. — ಶ್ರೀಶಾರದಾದೇವಿ.

ಅತ್ಯಂತ ಸುಖಜೀವನ ಬಯಸುತ್ತಿರುವ ಇಂದಿನ ಮಹಿಳೆಯಿಂದ ಇವೆಲ್ಲವೂ ಸಾಧ್ಯವೇ? ರುಚಿಯಾಗಿ ಶುಚಿಯಾಗಿ ಅಡುಗೆ ಮಾಡುವುದೇ ಬೇಸರ. ಮನೆಗೆ ಹೆಚ್ಚು ಮಂದಿ ಬಂದುಬಿಟ್ಟರೆ ಮತ್ತೂ ಕಷ್ಟ, ಸಂಕಟ! ಕಷ್ಟವೇ ಇಲ್ಲದೆ ಸದಾ ಸುಖವಾಗಿ, ಸಂತೋಷವಾಗಿ ಯಾವ ಜವಾಬ್ದಾರಿಯೂ ಕರ್ತವ್ಯವೂ ಕಟ್ಟುಪಾಡುಗಳೂ ಇಲ್ಲದೆ ದಿನಗಳನ್ನು ಕಳೆಯುವುದೆ ಜೀವನದ ಸಾರ್ಥಕತೆ ಎಂಬ ಮನೋಭಾವ ಇವರದು. ಅಸಹನೆ, ಅಸಂತೋಷ, ಅತೃಪ್ತಿ, ಅಸಹಾಯಕತೆ —ಇವುಗಳೊಡನೆ ನಿರಂತರ ಹೋರಾಟ, ಇನ್ನು ಬಾಳಿನ ಉದಾತ್ತ ಧ್ಯೇಯದೆಡೆಗೆ ಮನಸ್ಸನ್ನು ಹರಿಸಲು ಅವಕಾಶವೆಲ್ಲಿದೆ? ಅದಿಲ್ಲದೆ ಮಾನಸಿಕ ನೆಮ್ಮದಿ ಎಂತು?

## ವೈವಾಹಿಕ ಜೀವನ

ವಿವಾಹದ ವಿಷಯದಲ್ಲಿ ಆಧುನಿಕ ಮಹಿಳೆ ವಿಶೇಷ ಸ್ವಾತಂತ್ರ್ಯವನ್ನು ಅನುಭವಿಸುತ್ತಾಳೆ. ಸಮಾನತೆಗಾಗಿ ಹೋರಾಡುತ್ತಾಳೆ. ಶಾರದೆಯಾದರೋ ತನ್ನ ಪತಿಯನ್ನು ಶ್ರದ್ಧೆ ಗೌರವದಿಂದ ಕಾಣುತ್ತಾ ಪ್ರಶಾಂತ ಚಿತ್ತದಿಂದ ಇರುತ್ತಿದ್ದರು. ಇದರಿಂದಾಗಿ ಅವರ ಮನಸ್ಸು ಯಾವಾಗಲೂ ಮಾನವೀಯತೆ ಮತ್ತು ಪ್ರೇಮದಿಂದ ತುಂಬಿರುತ್ತಿತ್ತು. ದಾಂಪತ್ಯ ಜೀವನದ ಆದರ್ಶಗಳನ್ನು ಎತ್ತಿಹಿಡಿದರು. ವೇದಕಾಲದ ಋಷಿಗಳ ಜೀವನವನ್ನೇ ಕಲಿಯುಗದಲ್ಲೂ ಬಾಳಿತೋರಿದ ಅದ್ಭುತ ದಾಂಪತ್ಯ ರಾಮಕೃಷ್ಣ-ಶಾರದೆಯರದು. ಪತಿಗೆ ಪತ್ನಿಯೂ, ಶಿಷ್ಯಳೂ ಎಲ್ಲಕ್ಕೂ ಮಿಗಿಲಾಗಿ ಆಧ್ಯಾತ್ಮಿಕ ಸಂಗಾತಿಯೂ ಆದರು. ತುಂಬು ಯೌವನದಲ್ಲೂ ಪತಿಯ ಆಧ್ಯಾತ್ಮಿಕ ಸಾಧನೆಗೆ ಅಡ್ಡಿ ತರದೆ ಅದ್ಭುತ ಸಂಯಮ ತೋರಿದ ಪರಮಾದ್ಭುತ ಶಕ್ತಿ ಶ್ರೀಮಾತೆಯವರದು. ಆಧುನಿಕ ಮಹಿಳೆಯರಾದರೋ ಇಂದ್ರಿಯ ಸುಖಗಳೇ ಸರ್ವಸ್ವವೆಂದು ಪರಿಗಣಿಸುತ್ತಾ ತೃಪ್ತಿ ಶಾಂತಿ ಸಿಗದೆ ಅವುಗಳ ಹಿಂದೆಯೇ ಓಡುತ್ತಿರುವರು. ಇದರ ಪರಿಣಾಮರೂಪವಾಗಿ ಕಷ್ಟಚಿಂತೆಗಳ ಸಂಕೋಲೆಗಳಲ್ಲಿ ತಮ್ಮನ್ನು ತಾವೇ ಬಂಧಿಸಿಕೊಳ್ಳುತ್ತಿರುವರು.

ಶ್ರೀಮಾತೆ ಸಾಂಸಾರಿಕ ಜೀವನದ ಆದರ್ಶವನ್ನು ಎಲ್ಲ ಮಹಿಳೆಯರಿಗೂ ಎತ್ತಿತೋರಿಸಿ ಮಾರ್ಗದರ್ಶನ ಮಾಡಿದ್ದಾರೆ. ಪ್ರಾಪಂಚಿಕವಾದ ಎಲ್ಲ ಕೆಲಸಗಳನ್ನೂ ಅದು ಎಷ್ಟೇ ಆಸಕ್ತಿ ರಹಿತವಾದದ್ದಾದರೂ ಪರಮಾತ್ಮನ ಪೂಜೆಯನ್ನಾಗಿ ಪರಿವರ್ತಿಸುತ್ತಿದ್ದರು. ಎಂತಹ ಕಷ್ಟಕಾರ್ಪಣ್ಯಗಳಿದ್ದರೂ ತವರಿಗೆ ಓಡಿಹೋಗಿ ತಾಯಿ ಶ್ಯಾಮಸುಂದರೀದೇವಿಗೆ ತೊಂದರೆ ಕೊಟ್ಟವರಲ್ಲ. ಉಪ್ಪಿಗೂ ತೊಂದರೆ ಪಟ್ಟ ಅನೇಕ ದಿನಗಳನ್ನು ಎದುರಿಸಬೇಕಾಗಿ ಬಂದರೂ ಅತ್ತೆ ಚಂದ್ರಮಣೀದೇವಿಯನ್ನು ಒಮ್ಮೆಯೂ ದೂರಲಿಲ್ಲ. ಬದಲಾಗಿ ಎಲ್ಲ ಕುಂದುಕೊರತೆ

ಗಳಿಗೂ ಹೊಂದಿಕೊಳ್ಳುತ್ತಾ ಅತ್ತೆಯನ್ನು ತನ್ನ ತಾಯಿಯಂತೆಯೇ ಪ್ರೀತ್ಯಾದರಗಳಿಂದ ಕಾಣುತ್ತಾ ಅವರ ಸೇವೆಯನ್ನು ಕೊನೆಯವರೆಗೂ ಅತ್ಯಂತ ಭಯಭಕ್ತಿಗಳಿಂದ ಮಾಡುತ್ತಿದ್ದರು. ಅವರು ಒಮ್ಮೆ ಕರೆದರೂ "ಇದೋ ಬಂದೆ" ಎಂದು ಒಡನೆಯೇ ಧಾವಿಸಿ ಅವರ ಆಜ್ಞೆಯನ್ನು ಸಂತೋಷದಿಂದ ನೆರವೇರಿಸುತ್ತಿದ್ದರು. ಸೊಸೆಯಾದವಳು ತನ್ನ ಅತ್ತೆಯನ್ನು ಸ್ವಂತ ತಾಯಿಯಂತೆ ಕಂಡಾಗ ಅತ್ತೆಯೂ ಸೊಸೆಯನ್ನು ತನ್ನ ಮಗಳಂತೆಯೇ ಕಾಣಬೇಕು ಎಂಬ ಉದಾತ್ತ ಆದರ್ಶವನ್ನು ಎಲ್ಲ ಮಹಿಳೆಯರ ಮುಂದೂ ಇಟ್ಟಿದ್ದಾರೆ. ಇಂದಿನ ಎಲ್ಲ ಕುಟುಂಬಗಳಲ್ಲಿ ಈ ಆದರ್ಶ ಕಾರ್ಯರೂಪದಲ್ಲಿ ಬಂದರೆ ಅನೇಕ ದೊಡ್ಡ ದೊಡ್ಡ ಸಮಸ್ಯೆಗಳು ಪರಿಹಾರವಾಗಿ ಮನೆಮನೆಯಲ್ಲೂ ಶಾಂತಿಯ ವಾತಾವರಣ ತುಂಬಿತುಳುಕುತ್ತದೆಯಲ್ಲವೆ?

> ಇತರರಿಗೆ ಆನಂದವನ್ನು ನೀಡಲು ಒಬ್ಬನಿಗೆ ಸಾಧ್ಯವಾದರೆ ಅವನ ಜೀವನ ಸಾರ್ಥಕ. — *ಶ್ರೀಶಾರದಾದೇವಿ.*

ಸಂಸಾರವೆಂದಮೇಲೆ ಸುಖದುಃಖ ಏರುಪೇರುಗಳು ಇದ್ದದ್ದೇ. ಶ್ರೀಮಾತೆಯಾದರೋ ಅವುಗಳಾವುದನ್ನೂ ದೊಡ್ಡದು ಮಾಡದೆ ಎಲ್ಲರೊಡನೆ ಹೊಂದಿಕೊಂಡು ಎಲ್ಲರಿಗೂ ಆನಂದ ನೀಡಲು, ಮನೆಯಲ್ಲಿ ಪ್ರೀತಿಯ ವಾತಾವರಣ ಕಲ್ಪಿಸಲು ಸತತ ಪ್ರಯತ್ನಿಸುತ್ತಿದ್ದರು. ಅವರು ಪಟ್ಟ ಕಷ್ಟ ಕಡಮೆಯೇನಲ್ಲ. ಸಹೋದರರ ಸ್ವಾರ್ಥಪರತೆ, ಸೋದರ ಸೊಸೆಯರ ಪರಸ್ಪರ ಅಸೂಯೆ, ನಳಿನಿಯ ಅಸಂಬದ್ಧ ಮಡಿ, ರಾಧು ಸುರಬಾಲಾರ ಬುದ್ಧಿಮಾಂದ್ಯತೆ ಇವೆಲ್ಲದರಿಂದ ಅಶಾಂತ ವಾತಾವರಣ ಉಂಟಾಗುತ್ತಿದ್ದರೂ ತಮ್ಮ ಅಸಾಮಾನ್ಯ ಸಹನೆಯಿಂದ ತಮ್ಮ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಸಿ ಇಂದಿನ ನಾರಿಗೆ ಗೃಹಸ್ಥ ಜೀವನದ ಆದರ್ಶವನ್ನು ತೋರಿದ್ದಾರೆ.

ಪ್ರಾಪಂಚಿಕ ಕರ್ಮಗಳೆಲ್ಲವನ್ನೂ ಭಕ್ತಿಭರಿತ ಪೂಜೆಯನ್ನಾಗಿ ಮಾರ್ಪಾಡುಮಾಡಿ, ಅತ್ಯಂತ ಕಠಿಣ ಕಾರ್ಯಗಳಲ್ಲೂ, ಅಷ್ಟೇಕೆ ಅನಾಸಕ್ತ ವಿಚಾರಗಳಲ್ಲೂ ದೈವತ್ವವನ್ನು ಕಾಣುವ ಅದ್ಭುತ ಶಕ್ತಿ ಶ್ರೀಮಾತೆಯವರದು. ದೈನಂದಿನ ಜೀವನ ನಿರಂತರ ಕರ್ತವ್ಯ ಪಾಲನೆಯಿಂದ ತುಂಬಿರುತ್ತಿತ್ತು. ಸದಾ ಕೆಲಸಗಳಲ್ಲಿ ನಿರತರಾಗಿರುವವರ ಶರೀರ ಮತ್ತು ಮನಸ್ಸುಗಳೆರಡೂ ಆರೋಗ್ಯದಿಂದಿರುತ್ತವೆಂದು ಅವರೇ ಹೇಳುತ್ತಿದ್ದರು. ಇದನ್ನೇ ಇಂದಿನ ವಿಜ್ಞಾನವೂ ಸಾರುತ್ತಿರುವುದಲ್ಲವೆ?

### ವಿದ್ಯಾಭ್ಯಾಸ

ಆಧುನಿಕ ಮಹಿಳೆ ಅತ್ಯಂತ ವಿದ್ಯಾವಂತೆ. ಶ್ರೀಮಾತೆಯಾದರೋ ಅನಕ್ಷರಸ್ಥರು. ಆದರೂ ದೃಢವಾದ ಆತ್ಮವಿಶ್ವಾಸದಿಂದ ಅವರು ತೋರುತ್ತಿದ್ದ ಮಾರ್ಗದರ್ಶನ, ತೆಗೆದುಕೊಳ್ಳುತ್ತಿದ್ದ ತೀರ್ಮಾನ ಬಹಳ ಓದಿದವರಿಂದಲೂ ಸಾಧ್ಯವಾಗುತ್ತಿರಲಿಲ್ಲ.

ಸ್ತ್ರೀಯರಿಗೆ ವಿದ್ಯಾಭ್ಯಾಸವೇ ಸಿಗದಿದ್ದ ಅಂದಿನ ಸಮಾಜದಲ್ಲಿ ಅವರೆಲ್ಲರಿಗೂ ವಿದ್ಯಾಭ್ಯಾಸ ಪಡೆಯಲು ಧೈರ್ಯವಾಗಿ ಹೇಳಿದ ಶ್ರೀಮಾತೆ ಸ್ವತಃ ಸಂಪ್ರದಾಯಸ್ಥ ಕುಟುಂಬದವರಾದರೂ ಆಧುನಿಕ ಶಕ್ತಿಯಾಗಿ ನಿಂತು ಘೋಷಿಸಿದವರು. ಬಾಲ್ಯವಿವಾಹವನ್ನು ತಡೆಗಟ್ಟಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪ್ರೋತ್ಸಾಹ ನೀಡಿದರು. ಕಾಳೀಪೂಜೆಯದಿನ ನಿವೇದಿತೆಯ ಸಣ್ಣ ಶಾಲೆಯ ಪ್ರಾರಂಭೋತ್ಸವದಲ್ಲಿ ಪಾಲ್ಗೊಂಡಾಗ, "ಜಗನ್ಮಾತೆಯ ಆಶೀರ್ವಾದ ಈ ಶಾಲೆಯ ಮೇಲಿರಲಿ. ಈ ಶಾಲೆಯಲ್ಲಿ ತಯಾರಾದ ಮಕ್ಕಳು ಆದರ್ಶ ಬಾಲಿಕೆಯರಾಗಲಿ" ಎಂದು ಪ್ರಾರ್ಥಿಸುತ್ತಾ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡಿದರು.

### ಗೌರವ-ಮರ್ಯಾದೆ

ಇಂದಿನ ಮಹಿಳೆ ಘನತೆ ಗೌರವಗಳನ್ನು ಬಹಳಷ್ಟು ಶ್ರಮಪಟ್ಟು ಸಂಪಾದಿಸಿ ಸಿಕ್ಕ ಕಿಂಚಿತ್ ಗೌರವಕ್ಕೇ, ಕೀರ್ತಿಗೇ ತನ್ನ ಸಮಾನರಾರೂ ಇಲ್ಲವೆಂದು ಗರ್ವಪಟ್ಟು ಇತರರನ್ನು ಹೀನಾಯವಾಗಿ ಕಾಣಲು ಪ್ರಾರಂಭಿಸುತ್ತಾಳೆ. ಆದರೆ ಅಂದು ಶ್ರೀಮಾತೆಗೆ ಸಿಕ್ಕಿದ ಗೌರವ ಆದರಗಳು ಸಾಮಾನ್ಯವಾದುವೆ? ಸ್ವಯಂ ಅವತಾರ ಪುರುಷರಾದ ಶ್ರೀರಾಮಕೃಷ್ಣರಿಂದಲೇ ನೆರವೇರಿಸಿಕೊಂಡ 'ಷೋಡಶೀಪೂಜೆ'! ತಮ್ಮೆಲ್ಲ ಸಾಧನೆಯ ಫಲಗಳನ್ನು ಅವರು ಶ್ರೀಮಾತೆಗೆ ಅರ್ಪಿಸಿದಾಗ ಅವನ್ನು ಧರಿಸಿ ಜೀರ್ಣಿಸಿಕೊಳ್ಳುವ ಶಕ್ತಿ ಹೊಂದಿದವರು ಶ್ರೀಮಾತೆ. ಮುಂದೆ ಶಿಷ್ಯಾಗ್ರಣಿಗಳಾದ ಸ್ವಾಮಿ ವಿವೇಕಾನಂದ ಬ್ರಹ್ಮಾನಂದಾದಿಗಳು ತೋರಿದ ಗೌರವ, ಆದರ, ಭಕ್ತಿ, ಸ್ಥಾನ ಕಡಮೆಯೇ? ಇಂತಹ ಸ್ಥಾನ ಸಾಮಾನ್ಯ ಮಹಿಳೆಯೋರ್ವಳಿಗೇನಾದರೂ ದೊರೆತಿದ್ದ ಪಕ್ಷದಲ್ಲಿ ಗರ್ವದಿಂದ ಅವಳ ತಲೆ ತಿರುಗಿಬಿಡುತ್ತಿತ್ತು. ಶ್ರೀಮಾತೆಯಾದರೋ ಎಲ್ಲ ಗೌರವಾದರಗಳನ್ನು ಅತ್ಯಂತ ಸಾಧಾರಣವಾಗಿ ಸ್ವೀಕರಿಸಿ, ಮಕ್ಕಳು ಹೊಗಳಿದಾಗ ತಾಯಿ ಸಂತಸಪಟ್ಟರೂ ಮರುಕ್ಷಣವೇ ಅವರ ಸೇವೆ ಶುಶ್ರೂಷೆಗಳಲ್ಲಿ ನಿರತಳಾಗುವ ತಾಯಿಯಂತೆ ಅತ್ಯಂತ ಸಹಜವಾಗಿ ವರ್ತಿಸುತ್ತಿದ್ದರು. ಮಾತೃತ್ವ, ಮೃದುತ್ವ, ದಯಾಪರತೆ, ಕರುಣೆ, ಘನತೆ ಗಾಂಭೀರ್ಯ ಈ ಎಲ್ಲ ಮಹಾ ಗುಣಗಳ ಒಂದು ಅಪರೂಪದ ಸಂಯೋಜನೆಯಾಗಿದ್ದರು ಶ್ರೀಮಾತೆ. ಪ್ರಸನ್ನತೆ, ವಿನೋದ ಪ್ರವೃತ್ತಿ, ಕರುಣೆ ಭಗವದ್ಭಕ್ತಿ, ಭಗವಂತನಲ್ಲಿ ತನ್ಮಯತೆ, ಇವೆಲ್ಲವೂ ಅವರ ಸಹಜ ಗುಣಗಳೆ ಆಗಿದ್ದವು.

### ತೆರೆದ ಮನಸ್ಸು

ಒಂದು ಹೊಸಭಾವ ಮತ್ತು ಹೊಸಧರ್ಮಕ್ಕೆ ಸಂಬಂಧಪಟ್ಟ ವಿಷಯವನ್ನು ತಕ್ಷಣ ಗ್ರಹಿಸಬಲ್ಲ ಸಾಮರ್ಥ್ಯ ಶ್ರೀಮಾತೆಯವರಲ್ಲಿತ್ತು. ಒಮ್ಮೆ ಈಸ್ಟರ್ (ಕ್ರಿಶ್ಚಿಯನ್ ಹಬ್ಬದ) ದಿನ ನಿವೇದಿತೆಯ ಮನೆಗೆ ಶ್ರೀಮಾತೆಯವರು ಬಂದಾಗ ಈಸ್ಟರ್ ದಿನದ ವಿಶೇಷವನ್ನು ತಿಳಿಸಬೇಕೆಂದು ನಿವೇದಿತಾಳನ್ನು ಕೇಳುತ್ತಾರೆ. ನಿವೇದಿತಾ ಅದನ್ನು ವಿವರಿಸಿ ಒಂದು ಫ್ರೆಂಚ್ ವಾದ್ಯದೊಂದಿಗೆ ಕೆಲವು ಈಸ್ಟರ್ ಸಂಕೀರ್ತನೆಗಳನ್ನು ಹಾಡಿದಾಗ

ಶ್ರೀಮಾತೆಯವರು ಭಗವದ್ಭಾವದಲ್ಲಿ ತನ್ಮಯರಾಗುತ್ತಾರೆ. ಅವರ ಆಧ್ಯಾತ್ಮಿಕ ಪ್ರವೃತ್ತಿಯ ಸಂಸ್ಕಾರ ಸ್ಪಷ್ಟವಾಗಿ ವ್ಯಕ್ತವಾಯಿತು. ಕ್ರೈಸ್ತಧರ್ಮದಲ್ಲಿ ಪರಿಣತರಾದವರಲ್ಲಿ ಇರುವ ದೈವ ಭಾವ ನಿಸ್ಸಂದೇಹವಾಗಿ ಇವರಲ್ಲಿತ್ತು.

**ಶ್ರೀಮಾತೆಯವರ ಶೀಘ್ರಗ್ರಾಹಿತ್ವ ಮತ್ತು ಆ ಸಂಕೀರ್ತನೆಯೊಡನೆ ಅವರಿಗಿದ್ದ ಗಾಢ ಸಹಾನುಭೂತಿ ಯಾವ ಪರಕೀಯತೆಯ ಅಥವಾ ಅಪರಿಚಿತತೆಯ ತಡೆಯೂ ಇಲ್ಲದೆ ವ್ಯಕ್ತವಾದವು.** — ***ಸೋದರಿ ನಿವೇದಿತಾ***

ಮತ್ತೊಂದು ದಿನ ನಿವೇದಿತಾ ಮುಂತಾದ ಪಾಶ್ಚಾತ್ಯ ಭಕ್ತರೊಡನೆ ಇದ್ದಾಗ ಶ್ರೀಮಾತೆಯವರು ಐರೋಪ್ಯರು ಮದುವೆಯನ್ನು ಹೇಗೆ ಮಾಡುತ್ತಾರೆ ಎಂದು ಕೇಳಿದಾಗ ನಿವೇದಿತಾ ತನ್ನ ಸ್ನೇಹಿತೆಯೊಬ್ಬಳೊಡನೆ ವಿವಾಹದ ವಧೂವರರ ಅಭಿನಯ ಮಾಡಿ ತೋರಿಸುತ್ತಾ ಮದುವೆಯ ಸಮಯದಲ್ಲಿ ವಧೂವರರು ಮಾಡುವ ಪ್ರತಿಜ್ಞೆಯನ್ನು ವಿವರಿಸುತ್ತಾ, “ಒಳ್ಳೆಯದಾಗಲಿ ಕೆಟ್ಟದ್ದಾಗಲಿ, ಶ್ರೀಮಂತರಾಗಲಿ ಬಡವರಾಗಲಿ, ಆರೋಗ್ಯದಲ್ಲಿರಲಿ ಅನಾರೋಗ್ಯದಲ್ಲಿರಲಿ ಮರಣಪರ್ಯಂತ ನಾವು ಒಬ್ಬರನ್ನೊಬ್ಬರು ಅಗಲುವುದಿಲ್ಲ” ಎಂದು ಹೇಳಿದಾಗ ಶ್ರೀಮಾತೆಯವರು ಅದನ್ನು ಬಹಳ ಮೆಚ್ಚಿ ಮತ್ತೆ ಮತ್ತೆ ಆ ವಾಕ್ಯವನ್ನು ಉಚ್ಚರಿಸುತ್ತ, “ಓ! ಎಂತಹ ಧಾರ್ಮಿಕ ನುಡಿಗಳಿವು!” ಎಂದು ಕೊಂಡಾಡುತ್ತಾರೆ.

ಆಳವಾದ ಸಾಧನೆಯ ಫಲದಿಂದ ಪ್ರತಿಯೊಂದು ಜೀವಿಯಲ್ಲೂ ದೇವನನ್ನು ಕಾಣುವುದು ಅವರಿಗೆ ಅತ್ಯಂತ ಸಹಜವಾಗಿತ್ತು. ಜಯರಾಂಬಾಟಿಯಲ್ಲಿ ಅವರ ಮನೆಯನ್ನು ಕಟ್ಟುತ್ತಿದ್ದ ಮುಸಲ್ಮಾನ ಕೆಲಸದವರಿಗೆ ಪ್ರೀತಿಯಿಂದ ಉಣಬಡಿಸಿದರು. ಅತ್ಯಂತ ಬಡವನಾದ ಜಾಡಮಾಲಿಯೊಬ್ಬ ಕೊಟ್ಟ ಕಾಣಿಕೆಯನ್ನು ಪ್ರೀತಿಯಿಂದ ಸ್ವೀಕರಿಸಿದರು. ನಿವೇದಿತೆಯೇ ಮೊದಲಾದ ಅತ್ಯಾಧುನಿಕರಾದ ಅನೇಕ ಪಾಶ್ಚಾತ್ಯ ಮಹಿಳೆಯರನ್ನು ತಮ್ಮ ಮಕ್ಕಳಂತೆಯೇ ವಾತ್ಸಲ್ಯದಿಂದ ಕಂಡರು. ಒಂದೇ ವಾಕ್ಯದಲ್ಲಿ ಹೇಳುವುದಾದರೆ ಈ ವಸುಧೆಯೆ ಅವರ ಕುಟುಂಬವಾಗಿತ್ತು. ಈ ತಾಯಿಯ ವಾತ್ಸಲ್ಯಕ್ಕೆ ವರ್ಣಭೇದ, ಜಾತಿಭೇದ, ಭಾಷಾಭೇದ, ಜ್ಞಾನಿ ಅಜ್ಞಾನಿ ಎಂಬ ಯಾವುದೇ ಭೇದವಿರಲಿಲ್ಲ. ಇಂತಹ ವಿಶ್ವಪ್ರೇಮದಿಂದ ಕೂಡಿದ ಮಾತೃಭಾವ ಆಧುನಿಕ ಮಹಿಳೆಯರಲ್ಲಿ ಉಂಟಾದರೆ ಆಗ ಸಮಾಜದಲ್ಲಿ ಒಂದು ಅಭೂತಪೂರ್ವ ಪರಿವರ್ತನೆ ಆಗಲು ಸಾಧ್ಯ.

## ನಿರ್ಲಿಪ್ತತೆ

ಸಂಸಾರದಲ್ಲಿದ್ದರೂ ಅಷ್ಟೊಂದು ಬಂಧುಬಾಂಧವರೊಡಗೂಡಿದ್ದರೂ ಪದ್ಮಪತ್ರದಂತೆ ಯಾವುದಕ್ಕೂ ಅಂಟಿಕೊಳ್ಳದಿರುವುದು ಅವರಿಗೆ ಅತ್ಯಂತ ಸುಲಭಸಾಧ್ಯವಾಗಿತ್ತು. ರಾಧುವನ್ನು ಒಂದು ಕ್ಷಣವೂ ಅಗಲಿರಲಾಗದಿದ್ದ ಅವರು ಕಡೆಯಲ್ಲಿ ಅವಳ ಬಗ್ಗೆ ತೋರಿದ ನಿರ್ಲಿಪ್ತತೆ ಎಂತಹವರಿಗಾದರೂ ಅತ್ಯಂತ ಆಶ್ಚರ್ಯವನ್ನುಂಟುಮಾಡುವ ವಿಚಾರವಾಗಿದೆ. ಆದ್ದರಿಂದ ಈ ಲೌಕಿಕ ಸಂಬಂಧಗಳ ಬಂಧನ ಅವರಾಗಿಯೇ ತಂದುಕೊಂಡಿದ್ದುದು, ತಾವು ಇಚ್ಛಿಸಿದಾಗ ಅದರಿಂದ ಸುಲಭವಾಗಿ ಬಿಡಿಸಿಕೊಳ್ಳಲು ಅವರಿಗೆ ಸಾಧ್ಯವಿತ್ತು.

ಭಗವನ್ಮಯವಾದ ಜೀವನ ನಡೆಸುವುದರಿಂದ ಎಲ್ಲ ಜೀವಿಗಳೂ ಲೌಕಿಕ ಬಂಧನಗಳಿಂದ ಮುಕ್ತರಾಗಿ, ಮೃತ್ಯುವನ್ನು ಧೈರ್ಯವಾಗಿ ಎದುರಿಸುವ ಸಾಧ್ಯತೆ ಇದೆ ಎಂಬ ಸತ್ಯಾಂಶ ಶ್ರೀಮಾತೆಯವರ ಜೀವನದಿಂದ ತಿಳಿದುಬರುವುದು. ಇಂತಹ ದಿವ್ಯಪ್ರಭಾವ ಬೀರಿದ ಶ್ರೀಮಾತೆಯ ವ್ಯಕ್ತಿತ್ವದ ಮೂಲಶಕ್ತಿ ಯಾವುದು? ಈ ಅಶಿಕ್ಷಿತ ಮಹಿಳೆ ಸುಶಿಕ್ಷಿತ ಆಧುನಿಕ ಜನಾಂಗದ ಸ್ತ್ರೀಪುರುಷರಿಗೆ ಬೀರಿದ ಅದ್ಭುತ ಪ್ರಭಾವ ಸಾಮಾನ್ಯವಾದುದೇನು? ವರ್ತಮಾನಕಾಲದ ಸ್ವಾರ್ಥಭರಿತ ಅತಿ ಚಟುವಟಿಕೆಯ ವಿದ್ಯಾವಂತ ಮಹಿಳೆಗೂ ಇವರಿಗೂ ಅರ್ಥಾರ್ಥ ಸಂಬಂಧವಿಲ್ಲದಂತೆ ತೋರಿದರೂ ಶ್ರೀಮಾತೆಯ ವ್ಯಕ್ತಿತ್ವದ ಪ್ರಭಾವ ಸಂಪ್ರದಾಯಸ್ಥ ಹಳ್ಳಿಗಾಡಿನ ಜನರ ಮೇಲೂ ಪಟ್ಟಣದ ಅತ್ಯಾಧುನಿಕ ಜನರಮೇಲೂ ಸಮವಾಗಿ ಬೀರಿದೆ. ಆಧುನಿಕ ಯುಗದಲ್ಲಿ ಸತ್ಯ ಮತ್ತು ಮಾನವೀಯತೆಯಿಂದ ತುಂಬಿ, ಒಬ್ಬ ಸ್ತ್ರೀಯ ಮೂಲಭೂತ ಸ್ತ್ರೀತ್ವವೆಂಬುದೇನುಂಟೋ ಅದರ ಮೌಲ್ಯವನ್ನು ಸಂಪೂರ್ಣವಾಗಿ ಉಳಿಸಿಕೊಂಡು ನಡೆದುದೇ ಅವರ ಜೀವನದ ವೈಶಿಷ್ಟ್ಯ.

ಆದುದರಿಂದ ಆಧುನಿಕ ಮಹಿಳೆ ಈ ಆದರ್ಶಮಹಿಳೆಯ ಜೀವನವನ್ನು ದಾರಿದೀಪವಾಗಿ ಹಿಡಿದು ಸಾಗುವುದರಿಂದ ಹಾದಿ ಅತ್ಯಂತ ಸುಗಮವಾಗಿ ನೆಮ್ಮದಿಯ ನೆಲೆ ಸೇರಬಹುದು. ಈಗ ಭೌತಿಕವಾಗಿ ಶ್ರೀಮಾತೆ ನಮ್ಮೊಡನೆ ಇಲ್ಲದಿರಬಹುದು. ಆದರೆ ಅವರ ದಿವ್ಯಚೈತನ್ಯ ಸದಾ ನಮ್ಮೊಳಗಿದ್ದು ಹೊಸ ಸ್ಫೂರ್ತಿಯನ್ನೂ ಶಕ್ತಿಯನ್ನೂ ಕರುಣಿಸುವುದು. ❖

### ತಂಬೆಳಕು

**ಶ್ರೀಮಾತೆ ಶಾರದೆಯ ನಡೆ ಮತ್ತು ನುಡಿ ಹೇಗೆ?**
**ಲಜ್ಜೆಯೇ ಹೆಜ್ಜೆಯಿಟ್ಟಂತೆ; ಹಗಲಿನ ತಾರೆ**
**ಕಂಗೊಳಿಸದಿರುವಂತೆ! ಒಂದರ್ಥದಲಿ ಭವ್ಯ,**
**ಮತ್ತೊಂದರಲಿ ಸರಳ ರೀತಿ! ನೀರವ ಧ್ಯಾನ;**
**ನಿಶ್ಚಲವಾದ ಸೊಡರ ಕುಡಿ! ಮಡಿವಂತಿಕೆಯ ಬದುಕು**
**ಅಲ್ಲವೇ ಅಲ್ಲ; ಮಡಿ ಬದುಕು, ನಿಜ. ವಾತ್ಸಲ್ಯ**
**ವಾರಾಶಿ, ಆಕಾಶ : ಯಾರು ತಾನೇ ಹೊರಗು?**
**ಬೆರಗು; ಶ್ರೀರಾಮಕೃಷ್ಣರಿಗು ಗುರುವಾದಾಕೆ!**
**ಹಾರುತಿದೆ ಹಿಮಧವಲವಹ ವಿರಕ್ತಪತಾಕೆ**
**ಮದುವೆ ಕೋಟೆಯ ಮೇಲೆ! ಪೂರ್ಣಾರ್ಥದಲಿ ತಪ-**
**ಸ್ವಿನಿ, ಪಯಸ್ವಿನಿ! ಹಣ್ಣುಮರೆ ಹೂವು; ಕಾವು ತಿಲ-**
**ವಿರದಂಥ ತಂಬೆಳಕು, ಶರದ ಕಿರಣಕಲಾಪ!**
**ದಾಂಪತ್ಯದಲೆ ಭಿನ್ನ ವಿನ್ಯಾಸವೀ ತಾಯ**
**ಬಾಳು ಮಾದರಿ ಗೃಹಸ್ಥರಿಗು; ದಿವ್ಯೋಪಾಯ!**

**—ಡಾ.ಸಿ.ಪಿ.ಕೆ.**